## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1193/2021
ಮಂಡನಾಧಿಕಾರಿಗಳ ಶಾಖೆ. ಪಿ.ಒ. ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 11/04/2022

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ರಮೇಶ ಬಿನ್ ಶಂಕರ ನಾಯಿಕ, ಪೌರಾಯುಕ್ತರು, ನಗರಸಭೆ, ಯಾದಗಿರಿ, ಸದ್ಯ: ಪೌರಾಯುಕ್ತರು, ನಗರ ಸಭೆ, ರಾಯಚೂರು ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಈಶಾನ್ಯ ವಲಯ, ಕಲಬುರಗಿ ಇವರು ಯಾದಗಿರಿ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ರಮೇಶ ಬಿನ್ ಶಂಕರ ನಾಯಿಕ, ಪೌರಾಯುಕ್ತರು, ನಗರಸಭೆ, ಯಾದಗಿರಿ, ಸದ್ಯ: ಪೌರಾಯುಕ್ತರು, ನಗರ ಸಭೆ, ರಾಯಚೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಡಾ. ಜಗದೀಶ ಪೂಜಾರಿ ಬಿನ್ ಸಾಯಬಣ್ಣ ಪೂಜಾರಿ, ಸಾ: ಕನಕ ನಗರ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:-</u> ದೂರುದಾರರು ದಿನಾಂಕ 23/02/2017 ರಂದು ಯಾದಗಿರಿ ಠಾಣೆಗೆ ಹಾಜರಾಗಿ ಅವರ ಅಣ್ಣನಾದ ಡಾ. ಚಂದ್ರಕಾಂತ ತಂದೆ ಸಾಯಬಣ್ಣ ಪೂಜಾರಿ ಇವರ ಹೆಸರಿನಿಂದ ಇರುವ ಕನಕನಗರದಲ್ಲಿಯ ಸರ್ವೆ ನಂ. 4-5-109/ಎ ನೇದರಲ್ಲಿ ಕಟ್ಟಡ ಕಟ್ಟಲು ಅನುಮತಿ ಕೊಡಲು ಎದುರುದಾರರು 50,000/- ರೂಪಾಯಿ ಲಂಚದ ಬೇಡಿಕೆ ಇಟ್ಟಿದ್ದು, ಈ ಬಗ್ಗೆ ಮೊಬೈಲ್‌ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿರುತ್ತಾರೆ. ಮೃತ

ಹಣಮಂತರಾಯ ಇವರು 10,000/- ರೂಪಾಯಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಅದನ್ನು ಕಡಿಮೆ ಮಾಡಲು ಕೋರಿದಾಗ 5,000/- ರೂಪಾಯಿ ಕೊಡು ಅಂತ ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ಮೊಬೈಲ್‌ನ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿದ್ದು, ದೂರುದಾರರಿಗೆ ಸದರಿ ಲಂಚದ ನೀಡಲು ಇಷ್ಟವಿಲ್ಲದ ಕಾರಣ ಯಾದಗಿರಿ ಎ.ಸಿ.ಬಿ. ಪೊಲೀಸ್ ಠಾಣೆಗೆ ಮೊಬೈಲ್‌ನ ವಾಯ್ಸ್ ರೆಕಾರ್ಡರ್‌ನಲ್ಲಿ ದಾಖಲು ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 23/02/2017 ರಂದು ನೀಡಿರುತ್ತಾರೆ. ಈ ಬಗ್ಗೆ ಯಾದಗಿರಿ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 01/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 23/02/2017 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ದೂರುದಾರರು ಹಾಜರುಪಡಿಸಿದ ಮೊಬೈಲ್‌ನ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆ ಆಗಿದ್ದು ಅದನ್ನು ಲ್ಯಾಪ್‌ಟಾಪ್‌ಗೆ ವರ್ಗಾವಣೆ ಮಾಡಿ ಧ್ವನಿ ಮುದ್ರಿಕೆಯನ್ನು ಕೇಳಲಾಗಿ, ಅದರಲ್ಲಿ ಮೊದಲಿಗೆ "ನನಗೆ ಐದು ಸಾವಿರ ರೂಪಾಯಿ ಕೊಡು ಮತ್ತು ಕಮೀಷನರಿಗೆ ಹತ್ತು ಕೊಡು" ಅಂತಾ ಪೂಜಾರಿ ಕ್ಲರ್ಕ್ ಇವರು ಲಂಚದ ಹಣ ಬೇಡಿಕೆ ಇಟ್ಟಿರುವ ಬಗ್ಗೆ ಮತ್ತು ನಂತರದ ಸಂಭಾಷಣೆಯಲ್ಲಿ ನಗರಸಭೆಯ ಕಮೀಷನರವರು "ದಂಡದ ಮೊತ್ತದ ಫಿಫ್ಟಿ/ಅರ್ಧ ಕೊಡು ನಿನ್ನ ಕೆಲಸ ಮಾಡುತ್ತೇನೆ ಅಂತಾ ಹೇಳಿದ ಸಂಭಾಷಣೆ ಹಾಗೂ ಪೂಜಾರಿ ಕ್ಲರ್ಕ್ ಹಾಗೂ ಕಮೀಷನರ್ ರವರು ಫಿರ್ಯಾದಿಗೆ ಸದರಿ ಕಟ್ಟಡ ಪರವಾನಿಗೆ ಮಂಜೂರಾತಿಗಾಗಿ ಲಂಚದ ಹಣ ಬೇಡಿಕೆ ಇಟ್ಟಿರುವ ಬಗ್ಗೆ ಸಂಭಾಷಣೆ ಇರುತ್ತದೆ. ಆದ್ದರಿಂದ ಆರೋಪಿತ ಅಧಿಕಾರಿಗಳು, ಕಟ್ಟಡ ಪರವಾನಿಗೆ ನೀಡುವ ಸಂಬಂಧ ಫಿರ್ಯಾದಿಗೆ ಲಂಚದ ಹಣ ಬೇಡಿಕೆ ಇಟ್ಟಿರುವ ಬಗ್ಗೆ ಸದರಿ ಧ್ವನಿ ಮುದ್ರಿತ (ಮೊಬೈಲ ರಿಕಾರ್ಡಿಂಗ್) ಸಂಭಾಷಣೆಯಿಂದ ದೃಢೀಕರಣವಾಗುತ್ತದೆ" ಎಂದು ತನಿಖಾಧಿಕಾರಿಗಳು ವಹಿಸಿಕೊಡುವ ಪಂಚನಾಮೆಯಲ್ಲಿ ಉಲ್ಲೇಖಿಸಿರುತ್ತಾರೆ. ನಂತರ ಲಂಚದ ಹಣ ರೂ. 25,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಫಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಫಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ

ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಸಿದ್ದಣ್ಣ ತಂದೆ ಶಿವಣ್ಣ ಕುಂಬಾರ, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಯಾದಗಿರಿ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ, ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ದೂರುದಾರರಿಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡುವಂತೆ ತನಿಖಾಧಿಕಾರಿಗಳು ಸೂಚಿಸಿರುತ್ತಾರೆ. ಸದರಿ ಪಂಚನಾಮೆ ಕಾಲದಲ್ಲಿ ಹಂತ ಹಂತವಾಗಿ ಫೋಟೋಗಳನ್ನು ತೆಗೆದಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 23/02/2017 ರಂದು ಯಾದಗಿರಿ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯಿಂದ ಹೊರಟು ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ಸಾಯಂಕಾಲ 5-30 ಕ್ಕೆ ಸರ್ಕಾರಿ ವಾಹನದಲ್ಲಿ ಹೊರಟು ಯಾದಗಿರಿ ನಗರಸಭೆಯ ಕಛೇರಿ ಹತ್ತಿರ ಬಂದಾಗ ದೂರುದಾರರನ್ನು ಮತ್ತು ನೆರಳು ಸಾಕ್ಷಿಯನ್ನು ಎದುರುದಾರರ ಕಛೇರಿಗೆ ಕಳುಹಿಸಿ ಉಳಿದವರು ಅಲ್ಲಲ್ಲಿ ನಿಂತುಕೊಂಡಿದ್ದು ಸುಮಾರು 6-30 ಘಂಟೆ ಸಮಯದಲ್ಲಿ ದೂರುದಾರರು ಕಾರ್ಯಾಲಯದ ಹೊರಗೆ ಬಂದು ತನಿಖಾ ತಂಡಕ್ಕೆ ಕಾಣುವಂತೆ ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಹಾಗೂ ಸಹ ಪಂಚನೊಂದಿಗೆ ಎದುರುದಾರರ ಆಡಳಿತ ಕಛೇರಿ ಒಳಗೆ ಹೋಗಿ ದೂರುದಾರರು ತೋರಿಸಿದ ವ್ಯಕ್ತಿಗಳ ಹೆಸರು ಕೇಳಲಾಗಿ ಸದರಿಯವರು ಶ್ರೀ ರಮೇಶ ತಂದೆ ಶಂಕರ ನಾಯಿಕ, ನಗರಸಭೆ ಪೌರಾಯುಕ್ತರು ಎಂದು ತಿಳಿಸಿರುತ್ತಾರೆ. ಅವರಿಗೆ ತನಿಖಾಧಿಕಾರಿಗಳು ತಮ್ಮ ಗುರುತಿನ ಚೀಟಿ ತೋರಿಸಿ ತಮ್ಮ, ಪಂಚರ ಮತ್ತು ಸಿಬ್ಬಂದಿಯವರ ಪರಿಚಯ ನೀಡಿ ದೂರಿನ ವಿಷಯವನ್ನು ತಿಳಿಸಿರುತ್ತಾರೆ. ದೂರುದಾರರಿಂದ ಮತ್ತು ನೆರಳು ಸಾಕ್ಷಿರವರಿಂದ ಅಲ್ಲಿ ನಡೆದ ವಿದ್ಯಮಾನಗಳನ್ನು ಕೇಳಿ ತಿಳಿದು ಕೊಂಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ದೂರುದಾರರಿಂದ ಬೇಡಿ

ಬಲಗೈಯಿಂದ ಪಡೆದು ಪ್ಯಾಂಟಿನ ಬಲಗಡೆ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಆಗ ಎದುರುದಾರರನ್ನು ತನಿಖಾಧಿಕಾರಿಗಳು ವಿಚಾರಿಸಲಾಗಿ ಅವರು ತಾನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಹೇಳುತ್ತಾ ಯಾವುದೇ ಲಂಚದ ಹಣ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ. ಆಗ ತನಿಖಾಧಿಕಾರಿಗಳು ತನಿಖೆಗೆ ಸಹಕರಿಸಬೇಕೆಂದು ಸೂಚಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಮಾದರಿಗಾಗಿ ಸ್ವಲ್ಪ ದ್ರಾವಣವನ್ನು ಪ್ರತ್ಯೇಕ ಗಾಜಿನ ಬಾಟಲ್‌ನಲ್ಲಿ ಶೇಖರಿಸಿರುತ್ತಾರೆ. ನಂತರ ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣಗಳಲ್ಲಿ ಅದ್ದಿ ತೊಳೆಸಿದಾಗ ಅವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತವೆ. ಸದರಿ ದ್ರಾವಣಗಳನ್ನು ಪ್ರತ್ಯೇಕವಾಗಿ ಗಾಜಿನ ಎರಡು ಖಾಲಿ ಬಾಟಲ್‌ಗಳಲ್ಲಿ ಶೇಖರಿಸಿ ವಶಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಪ್ರತ್ಯೇಕ ಪ್ಯಾಂಟಿನ ವ್ಯವಸ್ಥೆ ಮಾಡಿ, ಅವರು ಧರಿಸಿದ್ದ ಪ್ಯಾಂಟನ್ನು ಕಳಚಿಸಿಕೊಂಡು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ಅದೂ ಸಹ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ಪ್ಯಾಂಟನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಲಂಚದ ಹಣದ ಬಗ್ಗೆ ಕೇಳಿದಾಗ ಸದರಿಯವರು ಹಿರಿಯ ಅಭಿಯಂತರರ ಕೋಣೆಯಲ್ಲಿ ಕೆಳಗೆ ಇಟ್ಟಿರುತ್ತೇನೆ ಎಂದು ತಿಳಿಸಿ ಎದುರುದಾರರು ಕರೆದುಕೊಂಡು ಹೋಗಿ ಲಂಚದ ಹಣ ಇಟ್ಟ ಸ್ಥಳವನ್ನು ತೋರಿಸಿ ಸದರಿ ಹಣವನ್ನು ಕೆಳಗಿನಿಂದ ತೆಗೆದು ಟೇಬಲ್ ಮೇಲೆ ಇಟ್ಟಿರುತ್ತಾರೆ. ಸದರಿ ಹಣವನ್ನು ಪರಿಶೀಲಿಸಲಾಗಿ ಸದರಿ ನೋಟುಗಳ ಸಂಖ್ಯೆ ಮತ್ತು ಮೌಲ್ಯ ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ನಮೂದಿಸಿದ ನೋಟಿನ ಮೌಲ್ಯ ಮತ್ತು ಸಂಖ್ಯೆಗೂ ತಾಳೆಯಾಗಿದ್ದು ಇರುತ್ತದೆ. ನಂತರ ಮರಳಿ ಎದುರುದಾರರ ಕೊಠಡಿಗೆ ಬಂದು ಮಲ್ಲಿಕಾರ್ಜುನ್ ತಂದೆ ಹಣಮಂತ ಕಛೇರಿ ವ್ಯವಸ್ಥಾಪಕರು, ನಗರಸಭೆ, ಯಾದಗಿರಿ ಹಾಗೂ ಶ್ರೀ ಜಯಪಾಲ ರೆಡ್ಡಿ, ಪರಿಸರ ಅಭಿಯಂತರರು, ನಗರಸಭೆ, ಯಾದಗಿರಿ, ಇವರಿಗೆ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ವರ್ಗಾಯಿಸಿ ಕೇಳಿಸಲಾಗಿ ಸದರಿಯವರು ಎದುರುದಾರ ಮತ್ತು ಮೃತ ಹನುಮಂತರಾವ್ ಪೂಜಾರಿ ಇವರ ಧ್ವನಿಗಳಾಗಿರುತ್ತವೆ ಎಂದು ಗುರುತಿಸಿರುತ್ತಾರೆ. ಇವರ ಸಮಕ್ಷಮ ಸಂಭಾಷಣೆಯು ರೆಕಾರ್ಡ್ ಆಗಿದ್ದ ಮೆಮೋರಿ ಕಾರ್ಡನ್ನು ತನಿಖಾಧಿಕಾರಿಗಳು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ. ಈ ಘಟನೆಯ ಬಗ್ಗೆ ಎದುರುದಾರರಿಗೆ ಸ್ವ ರಕ್ಷಣಾತ್ಮಕ ಹೇಳಿಕೆ ನೀಡಲು ಕೇಳಿಕೊಂಡಾಗ ಸದರಿಯವರು " ತಮ್ಮ ವಕೀಲರ ಸಲಹೆ ಪಡೆದು ಮುಂದಿನ

ದಿನಗಳಲ್ಲಿ ಬರೆದುಕೊಡುತ್ತೇನೆ" ಎಂದು ಸ್ವ ರಕ್ಷಣಾತ್ಮಕ ಹೇಳಿಕೆ ಕೊಟ್ಟಿರುತ್ತಾರೆ. ಅದರ ಮೇಲೆ ಪಂಚರು ಮತ್ತು ತನಿಖಾಧಿಕಾರಿಗಳು ಸಹಿ ಮಾಡಿ ಕಡತಕ್ಕೆ ಅಳವಡಿಸಿರುತ್ತಾರೆ. ದೂರುದಾರರ ಕಡತವು ಶ್ರೀ ಜಯಪಾಲರೆಡ್ಡಿ ಅವರ ಹತ್ತಿರ ಇರುವುದಾಗಿ ಎದುರುದಾರರು ತಿಳಿಸಿದ್ದರ ಮೇರೆಗೆ ಪ್ರಕರಣಕ್ಕೆ ಸಂಬಂಧ ಪಟ್ಟ 8 ಮೂಲ ದಾಖಲಾತಿಗಳನ್ನು ಪರಿಶೀಲಿಸಿ, ಅವುಗಳ ಜೆರಾಕ್ಸ್ ಪ್ರತಿಗಳನ್ನು ಕಛೇರಿಯ ವ್ಯವಸ್ಥಾಪಕರಾದ ಶ್ರೀ ಮಲ್ಲಿಕಾರ್ಜುನ ತಂದೆ ಹಣಮಂತ ಇವರು ದೃಢೀಕರಿಸಿ ನೀಡಿದ್ದನ್ನು ತನಿಖಾಧಿಕಾರಿಗಳು ಜಪ್ತಿ ಮಾಡಿರುತ್ತಾರೆ ಈ ಬಗ್ಗೆ ತನಿಖಾಧಿಕಾರಿಗಳು ಸವಿಸ್ತಾರ ಪಂಚನಾಮೆ ದಿ: 23/02/2017 ರಂದು ಸಾಯಂಕಾಲ 6-30 ಘಂಟೆಯಿಂದ ದಿ: 24/02/2017 ರಂದು ಮಧ್ಯ ರಾತ್ರಿ 1-00 ಘಂಟೆಯವರೆಗೆ ಯಾದಗಿರಿ ನಗರಸಭೆ ಕಛೇರಿಯಲ್ಲಿನ ಪೌರಾಯುಕ್ತರ ಕೊಠಡಿಯಲ್ಲಿ ಲೈಟಿನ ಬೆಳಕಿನಲ್ಲಿ ನಿರ್ವಹಿಸಿರುತ್ತಾರೆ.

5) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

6) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

7) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತಗೊಂಡ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

8) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ದಿನಾಂಕ 18/11/2021 ರಂದು ತಮ್ಮ ಸಮಜಾಯಿಷಿಯನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು "ಪೋಲೀಸ ಸಿಬ್ಬಂದಿಯವರು ದೂರುದಾರ ಜಗದೀಶ ಅವರ ಪ್ರಭಾವದಿಂದ ಮೇಲಾಧಿಕಾರಿಯವರಿಂದ ಒತ್ತಡ ಹಾಕಿ ಮತ್ತು ಪೋಲೀಸರನ್ನು ಒಪ್ಪಿಸಿ ನಮ್ಮ ವಿರುದ್ಧ ಸುಳ್ಳು ಪ್ರಕರಣ ದಾಖಲೆ ಮಾಡಿರುತ್ತಾರೆ. ಪ್ರಕರಣ ಮಾಡಿಕೊಂಡು ನಂತರ ಪೋಲೀಸ್ ಅಧಿಕಾರಿಯವರು ಅಲ್ಲೆ ಠಾಣೆಯಲ್ಲಿಯೇ ಎಲ್ಲ ಪಂಚನಾಮ ಮತ್ತು ನಾನು ಸದರಿ ಆರೋಪ ಲಂಚದ ಹಣವನ್ನು ತೆಗೆದು ಕೊಂಡಿರುತ್ತೇನೆ ಎಂದು ಸುಳ್ಳು ಬರೆದುಕೊಂಡಿರುತ್ತಾರೆ. ನಾನು ಲಂಚ ಕೇಳಿದ ಮಾತುಗಳನ್ನು ಜಗದೀಶ ಅವರು ಮೊಬೈಲ್‌ನಲ್ಲಿ ವೈಸ್ ರಿಕಾರ್ಡ ಆಗಿರುತ್ತದೆಂದು ಅದರ ಮೇರೆಗೆ ಪೋಲೀಸ್ ದೂರು ದಾಖಲು ಮಾಡಿರುತ್ತಾರೆ. ಅದರ ನಿಜಾಂಶವನ್ನು ಕೇಳಿ ಇರುವುದಿಲ್ಲ ಅವರು ಬೇರೆ ಯಾರು ಜೊತೆ ಈ

ವಿಷಯ ಸಂಭಾಷಣೆ ಮಾಡಿ ಸುಳ್ಳು ಸೃಷ್ಠಿ ಮಾಡಿರುತ್ತಾರೆ. ಅವರಿಗೆ ನಮ್ಮ ಕಛೇರಿಯಲ್ಲಿ ಯಾರು ಲಂಚ ಕೇಳುವ ಅವಶ್ಯಕತೆ ಇರುವುದಿಲ್ಲ ಯಾಕೆಂದರೆ ಸದರಿ ದೂರಿನ ಹಿಂದೆ ಅವರಿಗೆ ನಮ್ಮ ಕಛೇರಿಯಿಂದ ಕಟ್ಟಡ ಅನುಮತಿ ಕೊಟ್ಟಿರುತ್ತೇವೆ ನಮ್ಮ ಆದೇಶದ ನಂತರ ಅವರ ನಮಗೆ ಅವಮಾನ ಮತ್ತು ಸತಾಯಿಸುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿರುತ್ತಾರೆ. ಯಾಕೆಂದರೆ ನಾವು ಅವರು ನಮ್ಮ ಮೇಲೆ ಹಾಕಿರುವ ಒತ್ತಡಕ್ಕೆ ಮತ್ತು ಯಾವ ರಾಜಕಾರಣಿಗಳ ಮಾತು ಕೇಳಿ ಅವರು ಕಟ್ಟಬೇಕಾದ ಸದರಿ ಶುಲ್ಕ ಮತ್ತು ಕಛೇರಿಯ ನಿಯಮದ ಪ್ರಕಾರ ದಂಡ ಯಾವುದೇ ಕಡಿಮೇ ಮಾಡಿರುವುದಿಲ್ಲ" ಎಂದು ಸಮಜಾಯಿಷಿ ನೀಡುವುದರ ಜೊತೆಗೆ ಈ ಎಲ್ಲಾ ಅಂಶಗಳನ್ನು ಪರಿಗಣನೆ ಮಾಡಿ ಈ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ. ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

9) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

10) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

11/4/22

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.